ಉದಯಕಾಲ
UDAYAKALA
Tuesday, October 20, 2026

ಯೋಗ ತರಬೇತಿ ಶಿಬಿರ ಯಶಸ್ವಿ



ಭಾಲ್ಕಿ: ಯೋಗಾಭ್ಯಾಸದಿಂದ ಮನಸ್ಸು ಉಲ್ಲಾಸ ಹಾಗೂ ಉತ್ಸಾಹದಿಂದ ಕೂಡಿರುತ್ತದೆ ಎಂದು ಜೈ ಗುರುದೇವ ಯೋಗ ಟ್ರಸ್ಟ್ ಅಧ್ಯಕ್ಷ ಸಂತೋಷ ಬಿ.ಜಿ. ಪಾಟೀಲ ಹೇಳಿದರು.

ನಗರದ ದೇವಿನಗರದ ಭವಾನಿ ಮಂದಿರದಲ್ಲಿ ನವರಾತ್ರಿ ಉತ್ಸವದ ಅಂಗವಾಗಿ ಪತಂಜಲಿ ಯೋಗ ಸಮಿತಿ, ಜೈ ಗುರುದೇವ ಯೋಗ ಟ್ರಸ್ಟ್ ಹಾಗೂ ನವರಾತ್ರಿ ಉತ್ಸವ ಸಮಿತಿ, ದೇವಿನಗರ ಭಾಲ್ಕಿ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಯೋಗ ತರಬೇತಿ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಬಿರದಲ್ಲಿ ಯೋಗ ಶಿಕ್ಷಕರಾದ ಪಂಡಿತ ಪಾಟೀಲ, ಚಂದ್ರಕಾಂತ ಹೈಬತಪುರೇ, ಮಂಗಲಾ ಕಾಡಾದೆ, ರಮೇಶ ಬರ್ಮಾ ಹಾಗೂ ಸಿಂಧೂ ಹರಿದೇವ ಅವರು ವಿವಿಧ ಯೋಗಾಸನ, ಪ್ರಾಣಾಯಾಮ ಮತ್ತು ಆರೋಗ್ಯಕರ ಜೀವನಶೈಲಿಯ ಕುರಿತು ತರಬೇತಿ ನೀಡಿದರು. ಶಿಬಿರದಲ್ಲಿ ನೂರಾರು ಜನರು ಭಾಗವಹಿಸಿ ಯೋಗಾಭ್ಯಾಸದ ಪ್ರಯೋಜನ ಪಡೆದುಕೊಂಡರು.

ದೇವಸ್ಥಾನದ ಅಧ್ಯಕ್ಷ ದಿಲೀಪ ಧವಳೇ ಮಾತನಾಡಿದರು.

ಹಿರಿಯರಾದ ಸೂರ್ಯಕಾಂತ ಬಿರಾದಾರ, ನೀಲಕಂಠ ಬಿರಾದಾರ, ಸುರೇಶ ಕಾಳೆ, ಕಲ್ಲಪ್ಪ ಪಂಡರಗೆರೆ, ಸೋಮನಾಥ ಪಾಟೀಲ, ನಿರಂಜಪ್ಪ ಪಾತ್ರೆ, ಶಿವಾನಂದ ಗಂದಗೆ, ರಾಜಶೇಖರ ಪಾಟೀಲ, ಈಶ್ವರ ಪಾಟೋದೆ, ಮುರಳಿಧರ ತೋರಖಡೇ, ಧನರಾಜ, ಆರತಿ ಮೆಹತ್ರೆ ಸೇರಿದಂತೆ ನವರಾತ್ರಿ ಉತ್ಸವ ಸಮಿತಿ ಹಾಗೂ ಯೋಗ ಸಮಿತಿಯ ಪದಾಧಿಕಾರಿಗಳು, ಸದಸ್ಯರು ಹಾಜರಿದ್ದರು.

ಮೂರು ದಿನಗಳ ರಾಷ್ಟ್ರಮಟ್ಟದ ಸಮಾವೇಶಕ್ಕೆ ಸಿದ್ಧತೆ । ಬೆಳ್ಳಿ ರಥದಲ್ಲಿ ಬಸವಣ್ಣನವರ ಭವ್ಯ ಮೆರವಣಿಗೆ

ಅ.24ರಿಂದ ಬಸವಕಲ್ಯಾಣದಲ್ಲಿ 'ಕಲ್ಯಾಣ ಪರ್ವ' ರಜತ ಮಹೋತ್ಸವ

ಉದಯಕಾಲ ನ್ಯೂಸ್

ಬೀದರ್: ವಿಶ್ವಗುರು ಬಸವಣ್ಣನವರ ತತ್ವ ಸಿದ್ಧಾಂತಗಳು, ವಚನ ಸಾಹಿತ್ಯದ ಸಂದೇಶ ಹಾಗೂ ಶರಣರ ಸಮಾನತೆಯ ಆಶಯಗಳನ್ನು ವಿಶ್ವದೆಲ್ಲೆಡೆ ಪಸರಿಸುವ ಉದ್ದೇಶದಿಂದ ಬಸವ ಧರ್ಮ ಪೀಠ ಹಾಗೂ ಕಲ್ಯಾಣ ಪರ್ವ ಉತ್ಸವ ಸಮಿತಿ ವತಿಯಿಂದ ಅಕ್ಟೋಬರ್ 24ರಿಂದ 26ರವರೆಗೆ ಬಸವಕಲ್ಯಾಣದಲ್ಲಿ 25ನೇ ವರ್?ದ 'ಕಲ್ಯಾಣ ಪರ್ವ' ರಜತ ಮಹೋತ್ಸವವನ್ನು ಅದ್ಧೂರಿಯಾಗಿ ಆಯೋಜಿಸಲಾಗಿದೆ ಎಂದು ಬಸವಕಲ್ಯಾಣದ ಅಲ್ಲಮಪ್ರಭು ಶೂನ್ಯ ಪೀಠದ ಪೂಜ್ಯ ಸಿದ್ಧರಾಮೇಶ್ವರ ಸ್ವಾಮೀಜಿ ನುಡಿದರು.

ಸೋಮವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು,

ಬಸವಕಲ್ಯಾಣದ 108 ಅಡಿ ಎತ್ತರದ ಬಸವಣ್ಣನವರ ಪ್ರತಿಮೆ ಇರುವ ಬಸವ ಮಹಾಮನೆ ಆವರಣದಲ್ಲಿ ಮೂರು ದಿನಗಳ ಕಾಲ ರಾ?್ಟ್ರಮಟ್ಟದ ಧಾರ್ಮಿಕ, ಸಾಮಾಜಿಕ, ವೈಚಾರಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ತಿಳಿಸಿದರು.

ಲಿಂಗೈಕ್ಯ ಡಾ. ಮಾತೆ ಮಹಾದೇವಿ ಅವರ ನೇತೃತ್ವದಲ್ಲಿ 2001ರಲ್ಲಿ ಆರಂಭವಾದ ಕಲ್ಯಾಣ ಪರ್ವವು 24 ವರ್?ಗಳನ್ನು ಪೂರೈಸಿ ರಜತ ಮಹೋತ್ಸವದ ಸಂಭ್ರಮದಲ್ಲಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲದೆ ಮಹಾರಾ?್ಟ್ರ, ತೆಲಂಗಾಣ, ತಮಿಳುನಾಡು, ಗುಜರಾತ್ ಸೇರಿದಂತೆ ವಿವಿಧ ರಾಜ್ಯಗಳಿಂದ ಸಾವಿರಾರು ಶರಣರು, ಬಸವಾಭಿಮಾನಿಗಳು



ಹಾಗೂ ಭಕ್ತರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಹೇಳಿದರು.

ಕೂಡಲಸಂಗಮದ ಬಸವ ಧರ್ಮ ಪೀಠದ ಪೀಠಾಧ್ಯಕ್ಷೆ ಮಹಾಜಗದ್ಗುರು ಡಾ. ಮಾತೆ ಗಂಗಾದೇವಿ ಅವರ ದಿವ್ಯ ಸಾನ್ನಿಧ್ಯ ಹಾಗೂ ತಮ್ಮ(ಬಸವಕಲ್ಯಾಣದ ಅಲ್ಲಮಪ್ರಭು ಶೂನ್ಯ ಪೀಠದ ಪೂಜ್ಯ ಸಿದ್ಧರಾಮೇಶ್ವರ ಸ್ವಾಮೀಜಿ ಅವರ) ನೇತೃತ್ವದಲ್ಲಿ ಸಮಾವೇಶ ನಡೆಯಲಿದೆ. ಅಕ್ಟೋಬರ್ 24ರಂದು ಬೆಳಿಗ್ಗೆ ಸಾಮೂಹಿಕ ಇ?ಟಲಿಂಗ ಪೂಜೆ ಮತ್ತು ವೇದಿಕೆ ದೈವೀಕರಣದೊಂದಿಗೆ ಕಾರ್ಯಕ್ರಮಗಳಿಗೆ ಚಾಲನೆ ದೊರೆಯಲಿದೆ. ಬೆಳಿಗ್ಗೆ 10 ಗಂಟೆಗೆ ಖ್ಯಾತ ಸಂಗೀತ ನಿರ್ದೇಶಕ ನಾದಬ್ರಹ್ಮ ಹಂಸಲೇಖ ಅವರು ರಜತ ಮಹೋತ್ಸವವನ್ನು ಉದ್ಘಾಟಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಧ್ವಜಾರೋಹಣ ನೆರವೇರಿಸಲಿದ್ದು, ಶಾಸಕ ಶರಣು ಸಲಗರ ಗೌರವ ಅಧ್ಯಕ್ಷತೆ ವಹಿಸಲಿದ್ದಾರೆ. ಉದ್ಘಾಟನಾ ಸಮಾರಂಭದ ಬಳಿಕ ಧರ್ಮ ಚಿಂತನಗೋಷ್ಠಿ ನಡೆಯಲಿದೆ. ಮಧ್ಯಾಹ್ನ 3.30ರಿಂದ 5.30ರವರೆಗೆ ರಾಷ್ಟ್ರೀಯ ಬಸವ ದಳದ ರಾಷ್ಟ್ರೀಯ ಸಮಾವೇಶ ಹಾಗೂ ಸಂಜೆ 6.30ಕ್ಕೆ '12ನೇ ಶತಮಾನದ ಅನುಭವ ಮಂಟಪದಲ್ಲಿ ಮಹಿಳೆಯರ ಸ್ಥಾನ' ವಿ?ಯ ಕುರಿತು ಮಹಿಳಾ ಗೋಷ್ಠಿ ನಡೆಯಲಿದೆ. ವಿಧಾನ ಪರಿ?ತ್ ಉಪಸಭಾಪತಿ ಉಮಾಶ್ರೀ ಗೋಷ್ಠಿಯನ್ನು ಉದ್ಘಾಟಿಸಲಿದ್ದಾರೆ. ನೂತನವಾಗಿ ನಿರ್ಮಿಸಿರುವ ಹರಳಯ್ಯ ಸಮುದಾಯ ಭವನವನ್ನು ಮಾಜಿ ಸಚಿವ ಎಚ್. ಆಂಜನೇಯ ಉದ್ಘಾಟಿಸಲಿದ್ದಾರೆ ಎಂದು ವಿವರಿಸಿದರು.

ಹಿರಿಯರಾದ ಬಸವರಾಜ ಬುಳ್ಳಾ ಮಾತನಾಡಿ, ಅಕ್ಟೋಬರ್ 25ರಂದು ಬೆಳಿಗ್ಗೆ 7 ಗಂಟೆಗೆ ವಚನ ಸಾಹಿತ್ಯ ಮತ್ತು ಶರಣ ಧರ್ಮದ ರಕ್ಷಣೆಗಾಗಿ ಬಲಿದಾನ ಮಾಡಿದ 770 ಅಮರಗಣಂಗಳಿಗೆ ಶರಣ ವಂದನೆ ಸಲ್ಲಿಸಲಾಗುವುದು. ಬೆಳಿಗ್ಗೆ 8 ಗಂಟೆಗೆ ಪ್ರಥಮ ಶೂನ್ಯ ಪೀಠಾರೋಹಣದ 841ನೇ ಸಂಸ್ಮರಣೆ ಹಾಗೂ ದ್ವಿತೀಯ ಶೂನ್ಯ ಪೀಠಾರೋಹಣದ 24ನೇ ವಾರ್ಷಿಕೋತ್ಸವ ಜರುಗಲಿದೆ. ಬೆಳಿಗ್ಗೆ 10 ಗಂಟೆಗೆ 'ಬಸವಾದಿ ಪ್ರಮಥರು ಮತ್ತು ಸಾಮಾಜಿಕ ನ್ಯಾಯ' ವಿ?ಯದ ಸಮಾಜ ಚಿಂತನಗೋಷ್ಠಿಯನ್ನು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಉದ್ಘಾಟಿಸಲಿದ್ದಾರೆ. ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಧ್ವಜಾರೋಹಣ ನೆರವೇರಿಸಲಿದ್ದಾರೆ. ಮಧ್ಯಾಹ್ನ 3.30ಕ್ಕೆ ಮಹಾರಾ?್ಟ್ರದ ಶರಣರು ಹಾಗೂ ಬಸವಾಭಿಮಾನಿಗಳಿಗಾಗಿ ವಿಶೇ? ಮರಾಠಿ ಗೋಷ್ಠಿ ನಡೆಯಲಿದೆ. ಸಂಜೆ 6.30ಕ್ಕೆ ನಾಡಿನ ವಿವಿಧ ಮಠಾಧೀಶರ ಸಾನ್ನಿಧ್ಯದಲ್ಲಿ 'ಲಿಂಗಾಯತ ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆ: ಭವಿ?ದ ನಡೆ' ವಿ?ಯ ಕುರಿತು ಧರ್ಮ ಚಿಂತನಗೋಷ್ಠಿ ಆಯೋಜಿಸಲಾಗಿದೆ ಎಂದು ಹೇಳಿದರು.

ಸ್ವಾಗತ ಸಮಿತಿಯ ಅಧ್ಯಕ್ಷ ಸೋಮಶೇಖರ ಪಾಟೀಲ ಗಾದಗಿ ಮಾತನಾಡಿ, ಅಕ್ಟೋಬರ್ 26ರಂದು ಬೆಳಿಗ್ಗೆ ಸಾಮೂಹಿಕ ಇ?ಟಲಿಂಗ ಪೂಜೆ ಹಾಗೂ ಶರಣ ಸದ್ಭಾವನಾ ಗೋಷ್ಠಿ ನಡೆಯಲಿದೆ. ಬೆಳಿಗ್ಗೆ 10 ಗಂಟೆಗೆ ಬಸವಕಲ್ಯಾಣದ ಕೋಟೆ ಆವರಣದಿಂದ ಬೆಳ್ಳಿ ರಥದಲ್ಲಿ ವಿಶ್ವಗುರು ಬಸವಣ್ಣನವರ ಭಾವಚಿತ್ರ ಹಾಗೂ ವಚನ ಸಾಹಿತ್ಯದ ಭವ್ಯ ಮೆರವಣಿಗೆ ನಡೆಯಲಿದೆ ಎಂದರು. ಸಮಿತಿಯ ಕಾರ್ಯಾಧ್ಯಕ್ಷ ಜೈರಾಜ ಖಂಡ್ರೆ ಮಾತನಾಡಿ, ಶರಣ ಪಥಸಂಚಲನ' ಹೆಸರಿನಲ್ಲಿ ನಡೆಯಲಿರುವ ಈ ಮೆರವಣಿಗೆಗೆ ಸಂಸದ ಸಾಗರ್ ಖಂಡ್ರೆ ಚಾಲನೆ ನೀಡಲಿದ್ದಾರೆ. ಸ್ಥಳೀಯ ಆಡಳಿತಾಧಿಕಾರಿಗಳು ರಥೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 12.30ಕ್ಕೆ ಸಮಾರೋಪ ಸಮಾರಂಭ ಹಾಗೂ ದಾಸೋಹಿಗಳ ಗೌರವ ಸತ್ಕಾರದೊಂದಿಗೆ ಮೂರು ದಿನಗಳ ಉತ್ಸವ ಸಂಪನ್ನಗೊಳ್ಳಲಿದೆ ಎಂದವರು ತಿಳಿಸಿದರು. ಚಂದ್ರಶೇಖರ ಹೆಬ್ಬಾಳೆ ಮಾತನಾಡಿ, ಹುಲಸೂರಿನ ಶಿವಾನಂದ ಸ್ವಾಮೀಜಿ, ಸದ್ಗುರು ಮಹಾದೇಶ್ವರ ಸ್ವಾಮೀಜಿ, ಕುಂಬಳಗೋಡಿನ ಸದ್ಗುರು ಶಿವಯೋಗಿ ಮಹಾಸ್ವಾಮಿ, ಚಿತ್ರದುರ್ಗದ ಬಸವ ಹರಳಯ್ಯ ಸ್ವಾಮೀಜಿ ಹಾಗೂ ಹೈದರಾಬಾದ್‌ನ ಸದ್ಗುರು ನಿಜಾನಂದ ಸ್ವಾಮೀಜಿ ಸೇರಿದಂತೆ ನಾಡಿನ ವಿವಿಧ ಮಠಾಧೀಶರು ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಲಿದ್ದಾರೆ. ಎಚ್.ಕೆ. ಪಾಟೀಲ, ಸಂತೋ? ಲಾಡ್, ಬಿ.ಕೆ. ಹರಿಪ್ರಸಾದ್, ಭಗವಂತ ಖೂಬಾ, ರಹೀಂ ಖಾನ್, ಡಾ. ಅಜಯ್ ಸಿಂಗ್, ರಾಜಶೇಖರ ಪಾಟೀಲ, ಭೀಮರಾವ್ ಪಾಟೀಲ, ಚಂದ್ರಶೇಖರ ಪಾಟೀಲ, ಅಶೋಕ ಮನಗೂಳಿ, ಡಾ. ಶೈಲೇಂದ್ರ ಬೆಲ್ದಾಳೆ, ಕವಿತಾ ಮಿಶ್ರಾ ಸೇರಿದಂತೆ ವಿವಿಧ ಪಕ್ಷಗಳ ಜನಪ್ರತಿನಿಧಿಗಳು, ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ ಎಂದರು. ಪ್ರಚಾರ ಸಮಿತಿಯ ಅಧ್ಯಕ್ಷ ಶಿವಶರಣಪ್ಪ ಹುಗ್ಗೆ ಪಾಟೀಲ, ರಾಜೇಂದ್ರ ಗಂದಗೆ, ರಾಜೇಂದ್ರ ಜೊನ್ನಿಕೇರಿ ಮಾತನಾಡಿದರು.

ಉತ್ಸವ ಸಮಿತಿ ಖಜಾಂಚಿ ಸಂಜೀವಕುಮಾರ ಪಾಟೀಲ, ಮಾತನಾಡಿ, ಹೊರರಾಜ್ಯಗಳಿಂದ ಬರುವ ಭಕ್ತರಿಗಾಗಿ ವಿಶಾಲ ಮಂಟಪ, ವಸತಿ ಹಾಗೂ ಅನ್ನದಾಸೋಹದ ವ್ಯವಸ್ಥೆ ಮಾಡಲಾಗಿದೆ ಎಂದರು.

ಸಮಿತಿಯ ಪ್ರಧಾನ ಕಾರ್ಯದರ್ಶಿ ಸುರೇಶ ಸ್ವಾಮಿ, ಬೀದರ್ ಜಿಲ್ಲಾ ಲಿಂಗಾಯತ ಸಮಾಜದ ಅಧ್ಯಕ್ಷ ಕುಶಾಲರಾವ್ ಪಾಟೀಲ ಖಾಜಾಪುರ, ರಾಷ್ಟ್ರೀಯ ಬಸವ ದಳದ ರಾಜ್ಯಾಧ್ಯಕ್ಷ ಕೆ. ವೀರೇಶ, ಮಾರ್ಗದರ್ಶಕ ಕಂಟೆಪ್ಪ ಗಂದಿಗುಡಿ ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ನವೆಂಬರೊಳಗೆ ಕಾಮಗಾರಿ ಪೂರ್ಣಗೊಳಿಸಿ

ಉದಯಕಾಲ ನ್ಯೂಸ್

ಭಾಲ್ಕಿ: ನಗರದ ಹೊರವಲಯದಲ್ಲಿ ನಿರ್ಮಿಸಲಾಗುತ್ತಿರುವ ಅತ್ಯಾಧುನಿಕ ಕ್ರೀಡಾ ಸಂಕೀರ್ಣದ ಕಾಮಗಾರಿ ಇದೀಗ ಪೂರ್ಣಗೊಳ್ಳುವತ್ತ ಸಾಗುತ್ತಿದೆ. ಅಂದಾಜು ರೂ 15 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಈ ಮಹತ್ವಾಕಾಂಕ್ಷೆಯ ಯೋಜನೆಯ ಕಾಮಗಾರಿಯನ್ನು ಸೋಮವಾರ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿದ ಸಚಿವರು, ಈಗಾಗಲೇ ಸುಮಾರು ಅರ್ಧದಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು. ನವೆಂಬರ್ ತಿಂಗಳೊಳಗೆ ಕಾಮಗಾರಿ ಪೂರ್ಣಗೊಳಿಸಿ, ಕ್ರೀಡಾ ಬಳಕೆಗೆ ಸಂಕೀರ್ಣವನ್ನು ಉದ್ಘಾಟಿಸಲು ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.



ಭಾಲ್ಕಿಯ ಅಭಿವೃದ್ಧಿಗೆ ಮತ್ತೊಂದು ಮಹತ್ವದ ಕೊಡುಗೆಯಾಗಲಿರುವ ಈ ಕ್ರೀಡಾ ಸಂಕೀರ್ಣವು ತಮ್ಮ ಬಹುದಿನಗಳ ಕನಸಿನ ಯೋಜನೆಗಳಲ್ಲಿ ಒಂದಾಗಿದೆ ಎಂದು ಸಚಿವರು ಅಭಿಪ್ರಾಯಪಟ್ಟರು. ಗ್ರಾಮೀಣ ಪ್ರದೇಶಗಳಲ್ಲಿಯೂ ಕ್ರೀಡಾಪಟುಗಳಿಗೆ ನಗರ ಪ್ರದೇಶಗಳಲ್ಲಿರುವಂತೆ ಗುಣಮಟ್ಟದ ಕ್ರೀಡಾ ಸೌಲಭ್ಯಗಳು ದೊರೆಯಬೇಕು. ಯುವಕರಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಅವರಿಗೆ ಸೂಕ್ತ ತರಬೇತಿ ಹಾಗೂ ಸಾಧನೆಗೆ ಅಗತ್ಯವಾದ ಅವಕಾಶಗಳನ್ನು ಕಲ್ಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಕ್ರೀಡಾ ಸಂಕೀರ್ಣದ ಕಾಮಗಾರಿ ಪೂರ್ಣಗೊಂಡ ಬಳಿಕ ಭಾಲ್ಕಿ ನಗರದ ಜತೆಗೆ ಸುತ್ತಮುತ್ತಲಿನ ಗ್ರಾಮೀಣ ಭಾಗದ ಯುವಕರಿಗೂ ಅತ್ಯಾಧುನಿಕ ಕ್ರೀಡಾ ಸೌಲಭ್ಯಗಳು ದೊರೆಯಲಿವೆ. ಇದರಿಂದ

> **ಭಾಲ್ಕಿಯ ಅಭಿವೃದ್ಧಿಯೇ ನಮ್ಮ ಆದ್ಯತೆ. ಶಿಕ್ಷಣ, ಆರೋಗ್ಯ, ಮೂಲಸೌಕರ್ಯಗಳ ಜೊತೆಗೆ ಕ್ರೀಡಾ ಕ್ಷೇತ್ರದ ಅಭಿವೃದ್ಧಿಗೂ ವಿಶೇಷ ಆದ್ಯತೆ ನೀಡುತ್ತಿದ್ದೇವೆ. ನಮ್ಮ ಗ್ರಾಮೀಣ ಯುವಕರ ಪ್ರತಿಭೆಗೆ ಸೂಕ್ತ ವೇದಿಕೆ ಕಲ್ಪಿಸುವುದು ನಮ್ಮ ಸಂಕಲ್ಪ. ಈ ಕ್ರೀಡಾ ಸಂಕೀರ್ಣವನ್ನು ಶೀಘ್ರದಲ್ಲೇ ಕ್ರೀಡಾಪಟುಗಳ ಬಳಕೆಗೆ ಮುಕ್ತಗೊಳಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.**
> **। ಈಶ್ವರ ಖಂಡ್ರೆ, ಜಿಲ್ಲಾ ಉಸ್ತುವಾರಿ ಸಚಿವರು ಬೀದರ್**

ಸ್ಥಳೀಯ ಕ್ರೀಡಾಪಟುಗಳಿಗೆ ತಮ್ಮ ಪ್ರತಿಭೆಯನ್ನು ಬೆಳೆಸಿಕೊಳ್ಳಲು ಹಾಗೂ ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಲು ಉತ್ತೇಜನ ಸಿಗಲಿದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಲೋಕೋಪಯೋಗಿ ಇಲಾಖೆಯ ಎಇಇ ಅಲ್ತಾಪ್ ಮಿಯಾ ಇದ್ದರು.

IN THE COURT OF HON'BLE JMFC AT LINGASUGUR.

Cri Mise No: 1994/2026

Maqbul

//VS//

The Reg. of Death i.e. TMC Mudagal

To.
The Reg. of Death i.e.

Whereas, the above named petitioner has filed the said petition against respondent, for seeking the relief death certificate of petitioner father by name MAHAMMED SAB S/O KHADER SAB. DT:02-05-2005, AT MUDGAL Tq: Lingasuguru. Dist Raichur.. You are the respondent hereby notice to appear in this court in person or by duly authorized person or by pleader on the day 21 of november 2026 at 11 O' clock, before the above court at Lingasugur, to answer the claim and you are directed to produce on that day all the documents upon which you intended to relay in support of your defense. In default of your appearance on that day afore mentioned, the said case will be heard and determined in your absence.

2026. Given under my hand and seal of the court on this 7th day of Oct 2026

//By order of the court//

Advocate LINGASUGUR.

CHIEF MINISTARIAL OFFICER CIVIL JUDGE & J.M.F.C. LINGASUGUR.

ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್

IDFC FIRST Bank

(ಈ ಮೊದಲು ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಗ ಹೊಂದಿ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂದಾಗಿದೆ) CIN: L65110TN2014PLC097792, ನೋಂದಾಯಿತ ಕಚೇರಿ : ಕೆಆರ್‌ಎಂ ಟವರ್, 8 ನೇ ಮಹಡಿ ಹ್ಯಾರಿಂಗ್ಟನ್ ರಸ್ತೆ, ಚೆಟ್‌ಪೆಟ್, ಚೆನ್ನೈ–600031. ದೂ: + 9144 4564 4000 ಫ್ಯಾಕ್ಸ್ : +91 444564 4022

ಸೆಕ್ಷನ್ 13 (2) ರ ಸೆಕ್ಯುರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ, 2002 ರ ಅಡಿಯಲ್ಲಿ ಸೂಚನೆ.

ಈ ಕೆಳಗಿನ ಸಾಲಗಾರರು ಮತ್ತು ಸಹ–ಸಾಲಗಾರರು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಈ ಮೊದಲು ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಗ ಹೊಂದಿದೆ) ನಿಂದ ಕೆಳಗೆ ತಿಳಿಸಲಾದ ಭದ್ರತಾ ಸಾಲಗಳನ್ನು ಪಡೆದುಕೊಂಡಿದ್ದಾರೆ. ಕೆಳಗೆ ತಿಳಿಸಲಾದ ಸಾಲಗಾರರು ಮತ್ತು ಸಹ–ಸಾಲಗಾರರ ಸಾಲಗಳಿಗಾಗಿ ಅವರ ಈ ಕೆಳಗಿನ ಆಸ್ತಿಗಳ ಅಡಮಾನ ಮಾಡಿದ್ದು, ಅವರು ಆಯಾ ಸಾಲ ಒಪ್ಪಂದಗಳ ನಿಯಮಗಳು ಮತ್ತು ಷರತ್ತುಗಳನ್ನು ಪಾಲಿಸಲು ವಿಫಲರಾಗಿರುವುದರಿಂದ ಮತ್ತು ಅನಿಯಮಿತವಾಗಿರುವುದರಿಂದ, ಅವರ ಸಾಲವನ್ನು ಆರ್‌ಬಿಐ ಮಾರ್ಗಸೂಚಿಗಳ ಪ್ರಕಾರ ಎನ್‌ಪಿಎ ಎಂದು ವರ್ಗೀಕರಿಸಲಾಗಿದೆ. ಅವರು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಈ ಮೊದಲು ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಗ ಹೊಂದಿದೆ) ಗೆ ಪಾವತಿಸಬೇಕಾದ ಮೊತ್ತವನ್ನು ಈ ಕೆಳಗಿನ ಕೋಷ್ಟಕದಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಸಂಬಂಧಿತ ಸೂಚನೆಗಳ ಪ್ರಕಾರ ಉಲ್ಲೇಖಿಸಲಾಗಿದೆ ಮತ್ತು ಹೇಳಲಾದ ಮೊತ್ತಗಳ ಮೇಲಿನ ಹೆಚ್ಚಿನ ಬಡ್ಡಿಯೂ ಸಹ ಅನ್ವಯಿಸುತ್ತದೆ ಮತ್ತು ಅವರ ಆಯಾ ದಿನಾಂಕಗಳಿಂದ ಜಾರಿಗೆ ಬರುವ ಒಪ್ಪಂದದ ದರದ ಪ್ರಕಾರ ಅದನ್ನು ವಿಧಿಸಲಾಗುತ್ತದೆ.

ಕ್ರ. ಸಂ.	ಸಾಲದ ಖಾತಾ ಸಂ.	ಸಾಲದ ವರ್ಗ	ಸಾಲಗಾರರ ಮತ್ತು ಸಹ–ಸಾಲಗಾರರ ಹೆಸರು	ಸೆಕ್ಷನ್ 13(2) ಸೂಚನೆ ದಿನಾಂಕ	ಸೆಕ್ಷನ್ 13(2) ಸೂಚನೆಯಂತೆ ಬಾಕಿ ಮೊತ್ತ
1	146478060	ಆಸ್ತಿ ಮೇಲೆ ಸಾಲ	1. ಗುರುದಾಸ್ ತಿಮ್ಮಣ್ಣ ಗೌಡ 2. ಚಂದ್ರಕಲ ಗುರುದಾಸ್	07 ಅಕ್ಟೋಬರ್ 2026	INR 12,24,673.07/-

ಆಸ್ತಿ ವಿಳಾಸ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಮನೆ ಆಸ್ತಿಯ ಜಿಪಿ ನಂ. 177, ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ : 110 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 21 ಅಡಿ, ಒಟ್ಟು ಪ್ರದೇಶ 2310 ಚದರ ಅಡಿಯು ಕೊತ್ದೊಡ್ಡಿ ಗ್ರಾಮ, ಜಂಬಲದಿನ್ನಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿದ್ದು, ರಾಯಚೂರು ತಾಲೂಕು, ರಾಯಚೂರು ಜಿಲ್ಲೆ, ಕರ್ನಾಟಕ–584133 ಇಲ್ಲಿದ್ದು ಮತ್ತು ಚಕ್ಕುಬಂದಿ : ಪೂರ್ವಕ್ಕೆ : ಕರೆಪ್ಪ ರವರ ಮನೆ, ಪಶ್ಚಿಮಕ್ಕೆ : ಇ–ರಂಗೇಗೌಡ ರವರ ಮನೆ, ಉತ್ತರಕ್ಕೆ : ದಾರಿ, ದಕ್ಷಿಣಕ್ಕೆ : ಮಹಾದೇವ ರವರ ತೆರೆದ ಪ್ರದೇಶ.

ಮೇಲಿನ ಕೋಷ್ಟಕದಲ್ಲಿ ತೋರಿಸಿರುವ ವಿವರಗಳ ಪ್ರಕಾರ, ಅವುಗಳ ಸಂಬಂಧಿತ ದಿನಾಂಕಗಳಿಂದ ಒಪ್ಪಂದದ ಬಡ್ಡಿದರ ಮತ್ತು ಇತರ ವೆಚ್ಚಗಳು, ಶುಲ್ಕಗಳು ಇತ್ಯಾದಿಗಳ ಪ್ರಕಾರ, ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಗೆ (ಈ ಮೊದಲು ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಗ ಹೊಂದಿದೆ) ಮೊತ್ತವನ್ನು ಈ ಪ್ರಕಟಣೆಯ ದಿನಾಂಕದಿಂದ 60 ದಿನಗಳ ಒಳಗೆ ಪಾವತಿ ಮಾಡಬೇಕು, ತಪ್ಪಿದಲ್ಲಿ, ಕೆಳ ಸಹಿದಾರರರು ಸರ್ಫೇಸಿ ಕಾಯ್ದೆಯ ಸೆಕ್ಷನ್ 13 (4) ಮತ್ತು ಸೆಕ್ಷನ್ 14 ರ ಅಡಿಯಲ್ಲಿ, (ಈ ಮೊದಲು ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಗ ಹೊಂದಿ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂದಾಗಿದೆ) ಗೆ ಬಾಕಿ ಇರುವ ಮೊತ್ತವನ್ನು ವಸೂಲಿ ಮಾಡಲು ಸರ್ಫೇಸಿ ಕಾಯ್ದೆಯ ಸೆಕ್ಷನ್ 13 (4) ಮತ್ತು ಸೆಕ್ಷನ್ 14 ರ ಅಡಿಯಲ್ಲಿ ಕ್ರಮಗಳನ್ನು ಕೈಗೊಳ್ಳಲಿದ್ದಾರೆ. ಇದಲ್ಲದೆ, ಸದರಿ ಕಾಯಿದೆಯ ಸೆಕ್ಷನ್ 13 (13) ರ ಅಡಿಯಲ್ಲಿ ಸದರಿ ಭದ್ರತಾ ಸ್ವತ್ತುಗಳನ್ನು ನೀವು ಮಾರಾಟ/ಗುತ್ತಿಗೆ ಅಥವಾ ಬೇರೆ ರೀತಿಯಲ್ಲಿ ವರ್ಗಾಯಿಸುವುದನ್ನು ನಿರ್ಬಂಧಿಸಲಾಗಿದೆ.

ಸಹಿ/–
ಅಧಿಕೃತ ಅಧಿಕಾರಿ
ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್
ದಿನಾಂಕ : 20.10.2026 (ಈ ಮೊದಲು ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ
ಸ್ಥಳ : ರಾಯಚೂರು, ಕರ್ನಾಟಕ ಸಂಯೋಗ ಹೊಂದಿ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಆಗಿದೆ)

ಸಾಹಿತ್ಯದ ಒಲವು ಜನವಾಡಕರ್‌ರನ್ನು ಎತ್ತರಕ್ಕೆ ಬೆಳೆಸಿದೆ: ಪ್ರೊ.ಬಿರಾದಾರ



ಬೀದರ್: ಬಾಲ್ಯದಿಂದಲೇ ಸಾಹಿತ್ಯ ರಚನೆಯಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದ ಹಿರಿಯ ಸಾಹಿತಿ ಡಾ. ಎಸ್.ಎಂ. ಜನವಾಡಕರ್ ಅವರು, ಚಿಕ್ಕ ವಯಸ್ಸಿನಲ್ಲಿಯೇ ಸೋಲ್ಲಾಪುರದ ಸಿದ್ಧರಾಮೇಶ್ವರರ ಕುರಿತು ಕವನ ರಚಿಸಿದ್ದರು. ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತಮ್ಮದೇ ಆದ ಕೊಡುಗೆ ನೀಡಿರುವ ಅವರು ಇಂದು ಗೌರವ ಡಾಕ್ಟರೇಟ್ ಪುರಸ್ಕಾರಕ್ಕೆ ಭಾಜನರಾಗಿರುವುದು ಹೆಮ್ಮೆಯ ಸಂಗತಿ ಎಂದು ಬೀದರ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಎಸ್. ಬಿರಾದಾರ ಹೇಳಿದರು.

ನಗರದ ಪೂಜ್ಯ ಚನ್ನಬಸವ ಪಟ್ಟದ್ದೇವರು ಜಿಲ್ಲಾ ರಂಗಮಂದಿರದಲ್ಲಿ ಭಾನುವಾರ ಜನಪರ ಸಾಂಸ್ಕೃತಿಕ ಪ್ರತಿ?ನ, ಆನಂದ ಪ್ರಕಾಶನ, ಭಾರತೀಯ ಬೌದ್ಧ ಧಮ್ಮ ಚಾರಿಟೇಬಲ್ ಟ್ರಸ್ಟ್ ಹಾಗೂ ಡಾ. ಎಸ್.ಎಂ. ಜನವಾಡಕರ್ ಅವರ ಹಿತೈಷಿಗಳು ಮತ್ತು ಬಂಧು ಬಳಗದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಬಸವಕಲ್ಯಾಣ ಅನುಭವ ಮಂಟಪ, ಟ್ರಸ್ಟನ ಅಧ್ಯಕ್ಷರಾದ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ, ಜನವಾಡಕರ್ ಅವರು ಯಾವುದೇ ಪ್ರಚಾರದ ಹಂಗಿಲ್ಲದೆ ಮೌನವಾಗಿ ಸಾಹಿತ್ಯ ಕ್ಷೇತ್ರದಲ್ಲಿ ಸದ್ದಿಲ್ಲದ ಕ್ರಾಂತಿ ಮಾಡಿದ್ದಾರೆ. ಇಂತಹ ಯೋಗ್ಯ ವ್ಯಕ್ತಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದ ಬೀದರ್ ವಿಶ್ವವಿದ್ಯಾಲಯಕ್ಕೆ ಧನ್ಯವಾದ ಅರ್ಪಿಸುತ್ತೇನೆ. ಅವರ ಸಾಹಿತ್ಯ ಸೇವೆ ಮುಂದಿನ ಪೀಳಿಗೆಗೆ ಪ್ರೇರಣೆಯಾಗಲಿ ಎಂದು ಆಶಿಸಿದರು.

ಕೌಠಾ(ಬಿ) ಬಸವ ಯೋಗಾಶ್ರಮದ ಡಾ. ಸಿದ್ದರಾಮ ಶರಣರು ಬೆಲ್ದಾಳ ಸಾನಿಧ್ಯ ವಹಿಸಿದ್ದರು. ಆಣದೂರಿನ ವೈಶಾಲಿನಗರದ ಧಮ್ಮದರ್ಶನ ಭೂಮಿಯ ಪೂಜ್ಯ ಭಂತೆ ವರಜ್ಯೋತಿ ಥೇರೋ ಅವರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಹಾಲಹಳ್ಳಿಯ (ಕೆ) ದೇವನಾಂಪ್ರಿಯ ಪ್ರಿಯದರ್ಶಿ ಬುದ್ಧವಿಹಾರ ಶಾಂತಿಧಾಮದ ಪೂಜ್ಯ ಭಂತೆ ಧಮ್ಮದೀಪ ಸಮ್ಮುಖ ವಹಿಸಿದ್ದರು.

ಪ್ರೊ.ಪರಮೇಶ್ವರ ನಾಯಕ್, ಡಾ.ರಾಮಚಂದ್ರ ಗಣಾಪೂರ, ಸಾಹಿತಿ ಡಾ. ಸುನೀತಾ ಕೂಡ್ಲಿಕರ್ ಮಾತನಾಡಿದರು.

ಜಿಪಂ ಮಾಜಿ ಅಧ್ಯಕ್ಷ ಶಿವರಾಜ ಹಾಸನಕರ್, ಅಮೃತರಾವ ಚಿಮಕೋಡೆ, ಸುರೇಶ ಚನ್ನಶೆಟ್ಟಿ, ಡಾ.ಜಗನ್ನಾಥ ಹೆಬ್ಬಾಳೆ, ಮಾರುತಿ ಬೌದ್ಧೆ, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ವಿಜಯಕುಮಾರ ಸೋನಾರೆ, ಬೀದರ್ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ವಿಠಲದಾಸ ಪ್ಯಾಗೆ, ಭಾರತೀಯ ಬೌದ್ಧ ಧಮ್ಮ ಚಾರಿಟೇಬಲ್ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ಕಾಶಿನಾಥರಾವ ಫುಲೆ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಭಾರತಿ ವಸ್ತ್ರದ, ಶಿವರಾಜ ಕುದುರೆ, ಕಾಶೀನಾಥ್ ಚಲುವಾ, ನಿವೃತ್ತ ಪ್ರಾಚಾರ್ಯ ಡಿ. ನಿಜಾಮುದ್ದೀನ್, ಕಸಾಪ ತಾಲೂಕು ಅಧ್ಯಕ್ಷ ಟಿ.ಎಂ. ಮಚ್ಚೆ, ರವಿ ಗಂಗಶೆಟ್ಟಿ, ಲೀಲಾವತಿ ಚಾಕುತೆ ವೇದಿಕೆ ಮೇಲಿದ್ದರು. ಲೇಶಕುಮಾರ ಸ್ವಾಗತಿಸಿದರು. ದಿಲೀಪಕುಮಾರ ಮೋಘ ನಿರೂಪಿಸಿದರೆ, ಅಶೋಕಕುಮಾರ ವಂದಿಸಿದರು.

ಮಾನ್ಯ 1ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

ಕ್ರಿಮಿನಲ್ ಮಿಸಲೇನಿಯಸ್ ನಂ: 1822/2026

ಅರ್ಜಿದಾರರು:–
ಯಮುನಮ್ಮ ಗಂಡ ಶೇಖರಪ್ಪ ವಯಸ್ಸು: 40 ವರ್ಷ
ಉದ್ಯೋಗ: ಒಕ್ಕಲುತನ, ಸಾ॥ ಬಸಾಪೂರ ಕೆ ತಾ॥ ಸಿಂಧನೂರು ಜಿ॥ ರಾಯಚೂರು

:: ವಿರುದ್ಧ ::

ಎದುರುದಾರರು:–
1. ಮಾನ್ಯ ತಹಶೀಲ್ದಾರರು, ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ ಕಾರ್ಯಾಲಯ ಸಿಂಧನೂರು
2. ಸಂಬಂಧಪಟ್ಟ ಇತರೆ ತಕರಾರುದಾರರು

ಪ್ರಕಟಣೆ:–

ಮೇಲೆ ಹೆಸರಿಸಿದ ಅಪರಾಧಿಕ ಸಂಕೀರ್ಣ ಸಂಖ್ಯೆ: 1822/2026 ಸಲ್ಲಿಸಿದ ಅರ್ಜಿಯಲ್ಲಿ ಅರ್ಜಿದಾರಳ ಗಂಡನಾದ **ಶೇಖರಪ್ಪ ತಂದೆ ಶರಣಪ್ಪ (SHEKHARAPPA S/o SHARANAPPA)** ಇವರು ದಿನಾಂಕ: 01–02–2002 ರಂದು ಸಿಂಧನೂರು ತಾಲೂಕಿನ **ಬಸಾಪೂರ ಕೆ** ಗ್ರಾಮದ ಅರ್ಜಿದಾರಳ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಇವರ ಮರಣ ಪತ್ರವನ್ನು ಪಡೆಯಲು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿದಾರರು ಅರ್ಜಿಯನ್ನು ಸಲ್ಲಿಸಿದ್ದು, ನ್ಯಾಯಾಲಯವು ತಮ್ಮ ಹಾಜರಾತಿಗಾಗಿ 2026 ರ ನವೆಂಬರ್ ತಿಂಗಳು 7 ನೇ ದಿನದಂದು 11 ಗಂಟೆಗೆ ಈ ಅರ್ಜಿಗೆ ಸಂಬಂಧಿಸಿದಂತೆ ಉತ್ತರಿಸುವುದಕ್ಕಾಗಿ ನೀವು ಖುದ್ದಾಗಿ ಅಥವಾ ಸರಿಯಾಗಿ ಮಾಹಿತಿ ಪಡೆದಿರುವ ಮತ್ತು ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಬಲ್ಲ ವಕೀಲರ ಮೂಲಕ ಹಾಜರಾಗಬೇಕೆಂದು ಈ ನೋಟಿಸನ್ನು ಈ ಪ್ರಕಟಣೆ ಮೂಲಕ ಹೊರಡಿಸಲಾಗಿದೆ ಮತ್ತು ನಿಮ್ಮ ಹಾಜರಾತಿಗಾಗಿ ಮೇಲಿನ ದಿನಾಂಕವನ್ನು ನಿಗದಿಪಡಿಸಲಾಗಿದೆ.

ಈ ಮೇಲಿನಂತೆ ನಿಗದಿಪಡಿಸಿದ ದಿನದಂದು ಹಾಜರಾಗಲು ನೀವು ತಪ್ಪಿದಲ್ಲಿ ಸದರಿ ಅರ್ಜಿಯನ್ನು ಏಕಪಕ್ಷೀಯವಾಗಿ ವಿಚಾರಣೆ ಮಾಡಲಾಗುವುದೆಂದು ಹಾಗೂ ತೀರ್ಮಾನಿಸಲಾಗುವುದೆಂದು ಈ ಪ್ರಕಟಣೆ ಮೂಲಕ ತಿಳಿಸಲಾಗಿದೆ.

2026 ನೇ ವರ್ಷದ ಅಕ್ಟೋಬರ್ ತಿಂಗಳಿನ 19 ನೇ ದಿನಾಂಕದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೋಹರಿನೊಂದಿಗೆ ನೀಡಲಾಗಿದೆ.

ಸ್ಥಳ: ಸಿಂಧನೂರು
ದಿನಾಂಕ : 19/10/2026 ॥ನ್ಯಾಯಾಲಯದ ಆದೇಶದ ಪ್ರಕಾರ॥
ಮುಖಾಂತರ
ಮುಖ್ಯ ಲಿಪಿಕ ಅಧಿಕಾರಿಗಳು
ವಕೀಲರು, ಸಿಂಧನೂರು. ಸಿವಿಲ್ ನ್ಯಾಯಾಧೀಶರು
ನ್ಯಾಯಾಲಯ ಸಿಂಧನೂರು.

ಮಾನ್ಯ ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

ಕ್ರಿಮಿನಲ್ ಮಿಸಲೇನಿಯಸ್ ನಂ: 1802/2026

ಅರ್ಜಿದಾರರು:–
ಖಾಜಾ ತಂದೆ ಮಹೆಬೂಬ್ ಸಾಬ್ ವಯಸ್ಸು: 55ವರ್ಷ ಉದ್ಯೋಗ: ಒಕ್ಕಲುತನ,
ಸಾ॥ ವಾರ್ಡ್ ನಂ: 1, ಖೆಸಬಾವಾಡಿ, ಸಿಂಧನೂರು ತಾ॥ ಸಿಂಧನೂರು ಜಿ॥ ರಾಯಚೂರು

:: ವಿರುದ್ಧ ::

ಎದುರುದಾರರು:–
1. ಮಾನ್ಯ ಪೌರಾಯುಕ್ತರು ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ನಗರಸಭೆ ಕಾರ್ಯಾಲಯ ಸಿಂಧನೂರು
2. ಸಂಬಂಧಪಟ್ಟ ಇತರೆ ತಕರಾರುದಾರರು

ಪ್ರಕಟಣೆ:–

ಮೇಲೆ ಹೆಸರಿಸಿದ ಅಪರಾಧಿಕ ಸಂಕೀರ್ಣ ಸಂಖ್ಯೆ: 1802/2026 ಸಲ್ಲಿಸಿದ ಅರ್ಜಿಯಲ್ಲಿ ಅರ್ಜಿದಾರನ ತಾಯಿಯಾದ ಪೀರಮಾ ಗಂಡ **ಮಹೆಬೂಬ್ ಸಬ (PEERMA Wo MAHIBUB SAB)** ಇವರು ದಿನಾಂಕ: 13–05–1992 ರಂದು ಸಿಂಧನೂರು ತಾಲೂಕಿನ ನಗರದ ವಾರ್ಡ್ ನಂ: 1, ಖಸಬಾವಾಡಿಯ ಅರ್ಜಿದಾರನ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಇವರ ಮರಣ ಪತ್ರವನ್ನು ಪಡೆಯಲು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿದಾರರು ಅರ್ಜಿಯನ್ನು ಸಲ್ಲಿಸಿದ್ದು, ನ್ಯಾಯಾಲಯವು ತಮ್ಮ ಹಾಜರಾತಿಗಾಗಿ 2026 ರ ಅಕ್ಟೋಬರ್ ತಿಂಗಳು 30 ನೇ ದಿನದಂದು 11 ಗಂಟೆಗೆ ಈ ಅರ್ಜಿಗೆ ಸಂಬಂಧಿಸಿದಂತೆ ಉತ್ತರಿಸುವುದಕ್ಕಾಗಿ ನೀವು ಖುದ್ದಾಗಿ ಅಥವಾ ಸರಿಯಾಗಿ ಮಾಹಿತಿ ಪಡೆದಿರುವ ಮತ್ತು ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಬಲ್ಲ ವಕೀಲರ ಮೂಲಕ ಹಾಜರಾಗಬೇಕೆಂದು ಈ ನೋಟಿಸನ್ನು ಈ ಪ್ರಕಟಣೆ ಮೂಲಕ ಹೊರಡಿಸಲಾಗಿದೆ ಮತ್ತು ನಿಮ್ಮ ಹಾಜರಾತಿಗಾಗಿ ಮೇಲಿನ ದಿನಾಂಕವನ್ನು ನಿಗದಿಪಡಿಸಲಾಗಿದೆ.

ಈ ಮೇಲಿನಂತೆ ನಿಗದಿಪಡಿಸಿದ ದಿನದಂದು ಹಾಜರಾಗಲು ನೀವು ತಪ್ಪಿದಲ್ಲಿ ಸದರಿ ಅರ್ಜಿಯನ್ನು ಏಕಪಕ್ಷೀಯವಾಗಿ ವಿಚಾರಣೆ ಮಾಡಲಾಗುವುದೆಂದು ಹಾಗೂ ತೀರ್ಮಾನಿಸಲಾಗುವುದೆಂದು ಈ ಪ್ರಕಟಣೆ ಮೂಲಕ ತಿಳಿಸಲಾಗಿದೆ.

2026 ನೇ ವರ್ಷದ ಅಕ್ಟೋಬರ್ ತಿಂಗಳಿನ 19 ನೇ ದಿನಾಂಕದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೋಹರಿನೊಂದಿಗೆ ನೀಡಲಾಗಿದೆ.

ಸ್ಥಳ: ಸಿಂಧನೂರು
ದಿನಾಂಕ : 19/10/2026 ॥ನ್ಯಾಯಾಲಯದ ಆದೇಶದ ಪ್ರಕಾರ॥
ಮುಖಾಂತರ
ಮುಖ್ಯ ಲಿಪಿಕ ಅಧಿಕಾರಿಗಳು
ವಕೀಲರು, ಸಿಂಧನೂರು. ಸಿವಿಲ್ ನ್ಯಾಯಾಧೀಶರು
ನ್ಯಾಯಾಲಯ ಸಿಂಧನೂರು.

ಮಾನ್ಯ ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಸಿಂಧನೂರು ಇವರ ನ್ಯಾಯಾಲಯದಲ್ಲಿ

ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ : 2103/2025

1) ತಮೀಳಚೆಲ್ವಂ ತಂದೆ ಪಿ.ಕರುಪಯ್ಯ ವಯಸ್ಸು: 54 ವರ್ಷ, ಉದ್ಯೋಗ: ಒಕ್ಕಲುತನ
ಸಾ. ಆರ್.ಎಚ್. ನಂ.1 ಗ್ರಾಮ, ತಾ. ಸಿಂಧನೂರು ಜಿ, ರಾಯಚೂರು.

:: ವಿರುದ್ಧ ::

ಎದುರುದಾರರು
1) ಜನನ ಮತ್ತು ಮರಣ ನೋಂದಣಾಧಿಕಾರಿಗಳು, ತಹಶಿಲ್ದಾರರು, ತಹಶೀಲ್ ಕಾರ್ಯಾಲಯ ಸಿಂಧನೂರು.
2) ಸಂಬಂಧಪಟ್ಟ ಇತರೆ ತಕರಾರುದಾರರು

ಪ್ರಕಟಣೆ

ಮೇಲೆ ವಿವರಿಸದ ಅಪರಾಧಿಕ ಸಂಕೀರ್ಣ ಸಂಖ್ಯೆ: 2103/2026 ಅನ್ನು ಸಲ್ಲಿಸಿದ ಅರ್ಜಿದಾರ ತಂದೆಯಾದ ಪಿ.ಕರುಪಯ್ಯ ತಂದೆ ಪೊನ್ನನ್ ಇವರು ದಿನಾಂಕ 10–10–2024 ರಂದು ಸಿಂಧನೂರು ತಾಲೂಕಿನ ಆರ್.ಎಚ್.ನಂ.1 ಗ್ರಾಮದ ನಮ್ಮ ಮನೆಯಲ್ಲಿ ಮರಣ ಹೊಂದಿದ್ದು ಸದರಿಯವರ ಮರಣ ಪ್ರಮಾಣ ಪತ್ರ ಪಡೆಯಲು ಮಾನ್ಯ ನ್ಯಾಯಲಯದಲ್ಲಿ ಅರ್ಜಿಸಲ್ಲಿಸಿದ್ದು, ಸದರಿ ಅರ್ಜಿಯಲ್ಲಿ ಯಾವುದೇ ಹಿತಾಸಕ್ತಿ ಅಥವಾ ಯಾವುದೇ ತಕರಾರು ಇದ್ದ ಸಂಬಂಧಪಟ್ಟ ಎಲ್ಲರಿಗೂ ತಮ್ಮ ಹಾಜರಾತಿಗಾಗಿ ನ್ಯಾಯಲಯವು ದಿನಾಂಕ: 23–11–2026 ರಂದು ಬೆಳಗ್ಗೆ 11:00 ಗಂಟೆಗೆ ನಿಗದಿಪಡಿಸಿದ್ದು ಈ ಅರ್ಜಿಗೆ ಸಂಬಂಧಿಸಿದಂತೆ ಎಲ್ಲ ಪ್ರಶ್ನೆಗಳಿಗೆ ಉತ್ತರಿಸುವದಕ್ಕೆ ನೀವು ಖುದ್ದಾಗಿ ಅಥವಾ ಸರಿಯಾಗಿ ಮಾಹಿತಿ ಪಡೆದಿರುವ ವಕೀಲರ ಮೂಲಕ ಹಾಜರಾಗಬೇಕೆಂದು ಈ ನೋಟೀಸನ್ನು ಈ ಪ್ರಕಟಣೆ ಮೂಲಕ ಹೊರಡಿಸಲಾಗಿದೆ ಮತ್ತು ನಿಮ್ಮ ಹಾಜರಾತಿಗಾಗಿ ಮೇಲಿನ ದಿನಾಂಕವನ್ನು ನಿಗದಿಪಡಿಸಲಾಗಿದೆ.

ಈ ಮೇಲಿನಂತೆ ನಿಗದಿಪಡಿಸಿದ ದಿನದಂದು ಹಾಜರಾಗಲು ನೀವು ತಪ್ಪಿದಲ್ಲಿ ಸದರಿ ಅರ್ಜಿಯನ್ನು ಏಕಪಕ್ಷೀಯವಾಗಿ ವಿಚಾರಣೆ ಮಾಡಲಾಗುವುದೆಂದು ಹಾಗೂ ತೀರ್ಮಾನಿಸಲಾಗುವುದೆಂದು ಈ ಪ್ರಕಟಣೆ ಮೂಲಕ ತಿಳಿಸಲಾಗಿದೆ.

2026 ನೇ ವರ್ಷದ ಅಕ್ಟೋಬರ್ ತಿಂಗಳಿನ 19 ನೇ ದಿನಾಂಕದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೋಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಪ್ರಕಾರ
ಮುಖಾಂತರ
ಬೀರಲಿಂಗಪ್ಪ ವಿ ಉಪ್ಪಳ ವಕೀಲರು.ಸಿಂಧನೂರು
ಸ್ಥಳ: ಸಿಂಧನೂರು ಸಿ.ಎಂ.ಒ., ಸೀಜೆ & ಜೆ.ಎಂ.ಎಫ್.ಸಿ ಸಿಂಧನೂರು

AMBIT Finvest Pragati ke partner

ಅಂಬಿಟ್ ಫಿನ್ವೆಸ್ಟ್ ಪ್ರೈವೇಟ್ ಲಿಮಿಟೆಡ್

ಕಾರ್ಪೋರೇಟ್ ಕಚೇರಿ: ಕನಕಿಯಾ ವಾಲ್ ಸ್ಟ್ರೀಟ್, 5ನೇ ಮಹಡಿ, ಎ 506–510, ಅಂಧೇರಿ–ಕುರ್ಲಾ ರಸ್ತೆ, ಅಂಧೇರಿ ಪೂರ್ವ, ಮುಂಬೈ–400093

ಸ್ವಾಧೀನ ಸೂಚನೆ (ಸ್ಥಿರ ಆಸ್ತಿಗಾಗಿ) (ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 8 (1) ರ ಅಡಿಯಲ್ಲಿ)

ಕೆಳಗೆ ಸಹಿ ಮಾಡಿರುವವರು ಅಂಬಿಟ್ ಫಿನ್ವೆಸ್ಟ್ ಪ್ರೈವೇಟ್ ಲಿಮಿಟೆಡ್ನ ಅಧಿಕೃತ ಅಧಿಕಾರಿಯಾಗಿದ್ದು, ಅಂಬಿಟ್ ಹೌಸ್, 449, ಸೇನಾಪತಿ ಬಾಪತ್ ಮಾರ್ಗ, ಲೋವರ್ ಪರೇಲ್, ಮುಂಬೈ–400013 ನಲ್ಲಿ ನೋಂದಾಯಿತ ಕಚೇರಿಯನ್ನು ಹೊಂದಿದ್ದು, ಕನಕಿಯಾ ವಾಲ್ ಸ್ಟ್ರೀಟ್–5 ನೇ ಮಹಡಿ, ಎ 506–510, ಅಂಧೇರಿ–ಕುರ್ಲಾ ರಸ್ತೆ, ಅಂಧೇರಿ ಪೂರ್ವ, ಮುಂಬೈ–400093 ನಲ್ಲಿ ಕಾರ್ಪೊರೇಟ್ ಕಚೇರಿಯನ್ನು ಹೊಂದಿದ್ದು, ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ, 2002 (2002 ರ 54) ಅಡಿಯಲ್ಲಿ ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 3 ರೊಂದಿಗೆ ಓದಲಾದ ಸೆಕ್ಷನ್ 13 (12) ಅಡಿಯಲ್ಲಿ ನೀಡಲಾದ ಅಧಿಕಾರಗಳನ್ನು ಚಲಾಯಿಸುವ ಮೂಲಕ ಕೆಳಗೆ ಉಲ್ಲೇಖಿಸಲಾದ ಡಿಮ್ಯಾಂಡ್ ನೋಟಿಸ್ ಅನ್ನು ನೀಡಲಾಗಿದೆ, ಈ ಕೆಳಗಿನ ಸಾಲಗಾರರು ಸೂಚನೆಯನ್ನು ಸ್ವೀಕರಿಸಿದ ದಿನಾಂಕದಿಂದ 60 ದಿನಗಳ ಒಳಗೆ ಇಲ್ಲಿ ಉಲ್ಲೇಖಿಸಲಾದ ನೋಟಿಸ್ನಲ್ಲಿ ಉಲ್ಲೇಖಿಸಲಾದ ಮೊತ್ತವನ್ನು ಮರುಪಾವತಿಸಲು ಕರೆ ನೀಡುತ್ತಾರೆ. ಈ ಕೆಳಗಿನ ಸಾಲಗಾರರು ಮೊತ್ತವನ್ನು ಮರುಪಾವತಿಸಲು ವಿಫಲರಾಗಿದ್ದಾರೆ ಎಂದು ಈ ಕೆಳಗಿನ ಸಾಲಗಾರರಿಗೆ ಮತ್ತು ಕೆಳಗೆ ಸಹಿ ಮಾಡಿರುವ ಸಾರ್ವಜನಿಕರಿಗೆ ನೋಟಿಸ್ ನೀಡಲಾಗಿದೆ, 2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8 ರೊಂದಿಗೆ ಓದಲಾದ ಕಾಯ್ದೆಯ ಸೆಕ್ಷನ್ 13 ರ ಉಪವಿಭಾಗ (4) ರ ಅಡಿಯಲ್ಲಿ ಅವರಿಗೆ ನೀಡಲಾದ ಅಧಿಕಾರವನ್ನು ಚಲಾಯಿಸಿ ಕೆಳಗೆ ವಿವರಿಸಿದ ಆಸ್ತಿಗಳನ್ನು ಸ್ವಾಧೀನಪಡಿಸಿಕೊಂಡಿದ್ದಾರೆ.

ಸಾಲಗಾರ/ಸಹ–ಸಾಲಗಾರರು/ಖಾತರಿದಾರರ ಹೆಸರು ಮತ್ತು ಸಾಲ ಖಾತೆ ಸಂಖ್ಯೆ	ಡಿಮ್ಯಾಂಡ್ ನೋಟಿಸ್ ದಿನಾಂಕ ಮತ್ತು ಮೊತ್ತ	ಸ್ವಾಧೀನದ ದಿನಾಂಕ / ಸ್ವಾಧೀನದ ಪ್ರಕಾರ
1) ಎಂಆರ್ ಸುನಿಲ್ ಆರ್ 2) ಅನಿತಾ ಕಾಂಬಳೆ 3) ಅನಿಲ್ ಆರ್ ಲ್ಯಾನ್ ಸಂಖ್ಯೆ. SHA000000095395	12–08–2026. ರೂ. 20,12,259.23/– (ರೂಪಾಯಿ ಇಪ್ಪತ್ತು ಲಕ್ಷದ ಹನ್ನೆರಡು ಸಾವಿರದ ಎರಡು ಐವತ್ತೊಂಬತ್ತು ಮತ್ತು ಇಪ್ಪತ್ತಮೂರು ಮಾತ್ರ) ದಿನಾಂಕ: 10–06–2026	ಸಾಂಕೇತಿಕ ಸ್ವಾಧೀನ 13–10–2026

ಅಡಮಾನ ಇಟ್ಟಿರುವ ಸ್ಥಿರ ಆಸ್ತಿ/ಆಸ್ತಿಗಳ ವಿವರಣೆ: ಟಿಎಂಸಿ ಹೊಂದಿರುವ ವಾಸದ ಮನೆಯ ಆ ಎಲ್ಲಾ ಭಾಗ ಮತ್ತು ವಿಭಾಗಗಳು 3 MPL ಸಂಖ್ಯೆ 2–95/1 (ಹಳೆಯದು) CMC ಸಂಖ್ಯೆ 47-5-224/A (ಹೊಸದು) ವಾರ್ಡ್ ಸಂಖ್ಯೆ 26 ಶಹಾಪುರ ರಸ್ತೆ ದೇವಳಗುಡ್ಡ ಶೋರಾಪುರದಲ್ಲಿ ಇದೆ. ಪೂರ್ವದಿಂದ ಪಶ್ಚಿಮಕ್ಕೆ ಅಳತೆ 0.00 ಮೀಟರ್ ಮತ್ತು ಉತ್ತರ–ದಕ್ಷಿಣ 0.00 ಒಟ್ಟು ಅಳತೆ 86.5391445 ಚದರ ಮೀಟರ್ ಶೋರಾಪುರ ತಾಲ್ಲೂಕು ಶೋರಾಪುರ ಜಿಲ್ಲೆ ಯಾದಗಿರಿಗೆ ಸೀಮಿತವಾಗಿದೆ. ಗಡಿ ಪ್ರದೇಶ: ಪೂರ್ವ: ಪ್ರಶಾಂತ್ S/o ದೇವೀಂದ್ರಪ್ಪ ಕಾಂಬಳೆ ಅವರ ಆಸ್ತಿ ಪಶ್ಚಿಮ: ಕಮಲಾಬಾಯಿ ಶ್ರೀನಿವಾಸ ಕಾಂಬಳೆ ಅವರ ಆಸ್ತಿ ಉತ್ತರ: ಕಲಬುರ್ಗಿ ಶೋರಪುರ ಮುಖ್ಯ ರಸ್ತೆ ದಕ್ಷಿಣ: ಅನಿಲ್ S/o ರಮೇಶ್ ಕಾಂಬಳೆ ಅವರ ಆಸ್ತಿ

ಸಾಲಗಾರರು, ವಿಶೇಷವಾಗಿ ಸಾರ್ವಜನಿಕರು, ಆಸ್ತಿಯೊಂದಿಗೆ ವ್ಯವಹರಿಸದಂತೆ ಇಲ್ಲಿ ಎಚ್ಚರಿಕೆ ನೀಡಲಾಗಿದೆ ಮತ್ತು ಆಸ್ತಿಯೊಂದಿಗಿನ ಯಾವುದೇ ವ್ಯವಹಾರವು ಮೇಲೆ ತಿಳಿಸಲಾದ ಮೊತ್ತ ಮತ್ತು ಅದರ ಮೇಲಿನ ಬಡ್ಡಿಗೆ ಅಂಬಿಟ್ ಫಿನ್ವೆಸ್ಟ್ ಪ್ರೈವೇಟ್ ಲಿಮಿಟೆಡ್ನ ಶುಲ್ಕಕ್ಕೆ ಒಳಪಟ್ಟಿರುತ್ತದೆ. ಸುರಕ್ಷಿತ ಸ್ವತ್ತುಗಳನ್ನು ಪುನಃ ಪಡೆದುಕೊಳ್ಳಲು ಲಭ್ಯವಿರುವ ಸಮಯಕ್ಕೆ ಸಂಬಂಧಿಸಿದಂತೆ, ಕಾಯಿದೆಯ ಸೆಕ್ಷನ್ 13 ರ ಉಪ–ವಿಭಾಗ (8) ರ ನಿಬಂಧನೆಗಳಿಗೆ ಸಾಲಗಾರರ ಗಮನವನ್ನು ಆಹ್ವಾನಿಸಲಾಗಿದೆ.

ದಿನಾಂಕ: 20.10.2026. ಸ್ಥಳ: ಕರ್ನಾಟಕ ಸಹಿ/–ಅಧಿಕೃತ ಅಧಿಕಾರಿ – ಅಂಬಿಟ್ ಫಿನ್ವೆಸ್ಟ್ ಪ್ರೈವೇಟ್ ಲಿಮಿಟೆಡ್

equitas Small Finance Bank

ಇಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ (ಹಿಂದೆ ಇಕ್ವಿಟಾಸ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ನೋಂದಾಯಿತ ಕಚೇರಿ - ಸಂಖ್ಯೆ 769, ಸ್ಪೆನ್ಸರ್ ಪ್ಲಾಜಾ 4ನೇ ಮಹಡಿ, ಹಂತ II, ಅಣ್ಣಾ ಸಲೈ, ಚೆನ್ನೈ, ತಮಿಳುನಾಡು- 600002, ದೂರವಾಣಿ: 044- 42995000, 044-42995050

ಸ್ಥಿರ ಆಸ್ತಿಯ ಮಾರಾಟದ ಸೂಚನೆ

ಅನುಬಂಧ IV-A [ನಿಯಮ 8(6) ರ ನಿಬಂಧನೆಯನ್ನು ನೋಡಿ] – ಸ್ಥಿರ ಆಸ್ತಿಗಳ ಮಾರಾಟದ ಸೂಚನೆ

2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8 (6) ರ ನಿಬಂಧನೆಯೊಂದಿಗೆ ಓದಲಾದ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 ರ ಅಡಿಯಲ್ಲಿ ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆ. ಇಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ನ ಅಧಿಕೃತ ಅಧಿಕಾರಿ, ಸುರಕ್ಷಿತ ಸಾಲಗಾರರು ಸ್ವಾಧೀನಪಡಿಸಿಕೊಂಡಿರುವ, ಕೆಳಗೆ ವಿವರಿಸಿದ ಸ್ಥಿರ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟ್‌ಗೆ ಅಡಮಾನ ಮಾಡಲಾಗಿದೆ/ಚಾರ್ಜ್ ಮಾಡಲಾಗಿದೆ, ಅದನ್ನು "ಎಲ್ಲಿ ಇದೆಯೋ ಹಾಗೆಯೇ", "ಏನಿದೆಯೋ ಹಾಗೆಯೇ" ಮತ್ತು "ಕೆಳಗೆ ತಿಳಿಸಲಾದ ಖಾತೆಗಳಲ್ಲಿ ಬಾಕಿಗಳನ್ನು ವಸೂಲಿ ಮಾಡಲು ಆಧಾರವಿದೆಯೋ ಅಲ್ಲಿ ಮಾರಾಟ ಮಾಡಲಾಗುತ್ತದೆ ಎಂದು ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಸಾಲಗಾರರು, ಅಡಮಾನದಾರರು ಮತ್ತು ಖಾತರಿದಾರರಿಗೆ ಸೂಚನೆ ನೀಡಲಾಗಿದೆ. ಸಾಲಗಾರರು/ ಜಾಮೀನುದಾರರು/ ಸುರಕ್ಷಿತ ಆಸ್ತಿ ಬಾಕಿಗಳ ಮೀಸಲು ಬೆಲೆ/ಇ-ಹರಾಜು ದಿನಾಂಕ ಮತ್ತು ಸಮಯ ಮತ್ತು ಬಿಡ್ ಹೆಚ್ಚಳ ಮೊತ್ತದ ವಿವರಗಳನ್ನು ಕೆಳಗೆ ಉಲ್ಲೇಖಿಸಲಾಗಿದೆ.

ಕ್ರ. ಸಂ.	ಸಾಲಗಾರರು/ ಅಡಮಾನದಾರರು/ ಜಾಮೀನುದಾರರ ಹೆಸರು ಮತ್ತು ವಿಳಾಸ	ತಿಳಿದಿರುವ ಹೊರೆಗಳನ್ನು ಹೊಂದಿರುವ ಸ್ಥಿರ ಆಸ್ತಿಗಳ ವಿವರಣೆ, ಯಾವುದಾದರೂ ಇದ್ದರೆ	ಮೀಸಲು ಬೆಲೆ ಇಎಂಡಿ ಬೆಲೆ ಮತ್ತು ಬಿಡ್ ಬೆಲೆ ಏರಿಕೆ	ಇ-ಹರಾಜಿನ ದಿನಾಂಕ ಮತ್ತು ಸಮಯ	ಸಾಲ / ಒಟ್ಟು ಬಾಕಿಗಳು
1.	**ಶ್ರೀ/ಶ್ರೀರಾಮ್ C/o ಶ್ರೀ/ಶ್ರೀಮತಿ ಕೃಪಿನಯ್ಯ ಶ್ರೀ/ಶ್ರೀಮತಿ ರಕ್ಷಿತಾ C/o ಶ್ರೀ/ಶ್ರೀಮತಿ ಶ್ರೀ (ಇಬ್ಬರೂ ವಾಸ:** ಬಿಚ್ಚಲ್ ರಾಯಚೂರು,, ಬಿಚ್ಚಲ್, ರಾಯಚೂರು, ಕರ್ನಾಟಕ, 584140)	ಸ್ಥಿರ ಆಸ್ತಿಯ ವಿವರ: ಆಸ್ತಿ ಸಂಖ್ಯೆ 273, ಸರ್ವೆ ಸಂಖ್ಯೆ 524, ಆರ್‌ಡಿಪಿಆರ್ ಪಿಐಡಿ ಸಂಖ್ಯೆ 152300400800100576 ಅನ್ನು ಹೊಂದಿರುವ ಆಸ್ತಿ ಇದು ರಾಯಚೂರು ತಾಲೂಕು ಮತ್ತು ಜಿಲ್ಲೆಯ ಬಿಚಾಲಿ ಗ್ರಾಮ ಹಾಗೂ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿದೆ. ಅಳತೆಗಳು: ಪೂರ್ವ-ಪಶ್ಚಿಮಕ್ಕೆ 12.192 ಮೀಟರ್ (40 ಅಡಿ) ಮತ್ತು ಉತ್ತರ-ದಕ್ಷಿಣಕ್ಕೆ 9.144 ಮೀಟರ್ (30 ಅಡಿ). ಒಟ್ಟು ವಿಸ್ತೀರ್ಣ 111.48 ಚದರ ಮೀಟರ್ (1200 ಚದರ ಅಡಿ). ನಿರ್ಮಿತ ಪ್ರದೇಶ 111.48 ಚದರ ಮೀಟರ್ (1200 ಚದರ ಅಡಿ).	ರೂ.2736000 ರೂ.273600 ರೂ.10,000	26.11.2026 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ	ಸಾಲ ಖಾತೆ ಸಂಖ್ಯೆ:- SERICHR0419839 / 200002224333 ಕ್ಲೈಮ್ ಬಾಕಿ ಇರುವ ಮೊತ್ತ 22.01.2026 ರಂತೆ ರೂ.2624166/- ಮತ್ತು 23.01.2026 ರಿಂದ ಹೆಚ್ಚಿನ ಬಡ್ಡಿಯೊಂದಿಗೆ ಮಾಸಿಕ ವಿಶ್ರಾಂತಿ, ಶುಲ್ಕಗಳು ಮತ್ತು ವೆಚ್ಚಗಳು ಇತ್ಯಾದಿ, (08.10.2026 ರಂತೆ ಒಟ್ಟು ಬಾಕಿ ರೂ.2615745/-)
	ಖರೀದಿ ಮತ್ತು ಮಾರಾಟದ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಪ್ರಶ್ನೆಗಳಿಗೆ ಸಂಪರ್ಕಿಸಿ: ಸುದರ್ಶನ್ ಪಿ 7975022716 , ರವೀಂದ್ರ ಮಲಕಪ್ಪ ಕೊಂಬಿನ್.ಎಂ 9731952051				
2.	**ಶ್ರೀ/ಶ್ರೀಮತಿ ರೇಣುಕಾ C/o ಶ್ರೀ/ ಶ್ರೀಮತಿ ಅಂಜಿನೇಯ್ಯ ಶ್ರೀ/ಶ್ರೀಮತಿ ಅಂಜಿನಯ್ಯ C/o ಶ್ರೀ/ ಶ್ರೀಮತಿ ಹುಮಂತಪ್ಪ (ಇಬ್ಬರೂ ವಾಸ:** 12-8-201/2 ಸಿಯಾ ತಲಾಬ್ ರಾಯಚೂರು, ರಾಯಚೂರು, ರಾಯಚೂರು, ಕರ್ನಾಟಕ, 584101)	ಸ್ಥಿರ ಆಸ್ತಿಯ ವಿವರ: ರಾಯಚೂರು ತಾಲೂಕು ಮತ್ತು ಜಿಲ್ಲೆಯ ಸಿಯಾ ತಲಾಬ್ ಪ್ರದೇಶದಲ್ಲಿರುವ ಆಸ್ತಿ; ಪಿ.ಐ.ಡಿ ಸಂಖ್ಯೆ: 31-3-560-184, ವಾರ್ಡ್ ಸಂಖ್ಯೆ: 31, ಪುರಸಭೆ/ನಗರಸಭೆ ಸಂಖ್ಯೆ: 12-8-209/1. ಅಳತೆ: ಪೂರ್ವ-ಪಶ್ಚಿಮ 12.192024 ಮೀಟರ್‌ಗಳು (40 ಅಡಿ), ಉತ್ತರ-ದಕ್ಷಿಣ 6.096012 ಮೀಟರ್‌ಗಳು (20 ಅಡಿ). ಒಟ್ಟು ವಿಸ್ತೀರ್ಣ 74.3224 ಚದರ ಮೀಟರ್‌ಗಳು (800 ಚದರ ಅಡಿ) ಮತ್ತು ನಿರ್ಮಿತ ಪ್ರದೇಶ 800 ಚದರ ಅಡಿ. ಗಡಿಗಳು: ಉತ್ತರಕ್ಕೆ - 31-3-560-185, ದಕ್ಷಿಣಕ್ಕೆ - 31-3-560-181, ಪೂರ್ವಕ್ಕೆ - 31-3-559-165, ಪಶ್ಚಿಮಕ್ಕೆ - 31-3-580-ರಸ್ತೆ.	ರೂ.1920000 ರೂ.192000 ರೂ.10,000	26.11.2026 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ	ಸಾಲ ಖಾತೆ ಸಂಖ್ಯೆ:- SERICHR0451480 ಕ್ಲೈಮ್ ಬಾಕಿ ಇರುವ ಮೊತ್ತ 19.08.2025 ರಂತೆ ರೂ.1024989/- ಮತ್ತು 20.08.2025 ರಿಂದ ಹೆಚ್ಚಿನ ಬಡ್ಡಿಯೊಂದಿಗೆ ಮಾಸಿಕ ವಿಶ್ರಾಂತಿ, ಶುಲ್ಕಗಳು ಮತ್ತು ವೆಚ್ಚಗಳು ಇತ್ಯಾದಿ, (08.10.2026 ರಂತೆ ಒಟ್ಟು ಬಾಕಿ ರೂ.1297647/-)
	ಖರೀದಿ ಮತ್ತು ಮಾರಾಟದ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಪ್ರಶ್ನೆಗಳಿಗೆ ಸಂಪರ್ಕಿಸಿ: ಸುದರ್ಶನ್ ಪಿ 7975022716 , ರವೀಂದ್ರ ಮಲಕಪ್ಪ ಕೊಂಬಿನ್.ಎಂ 9731952051				
3.	**ಶ್ರೀಮತಿ/ಶ್ರೀಮತಿ ಸೋನಾ ಬಾಯಿ ಶ್ರೀಮತಿ/ಶ್ರೀಮತಿ ರಾಮರೆಡ್ಡಿ ಆರ್ (ಇಬ್ಬರೂ ವಾಸ:** ಎಚ್ ನಂ 12/72 ಜಪಾನಾಯಕ್ ತಾಂಡಾ, ಕನ್ನೆಕೋಲೂರು, ಶಹಾಪುರ, ಕನ್ನೆಕೋಲ್ಲೂರು ಬಿ.ಒ-ಉತ್ತರ ಕರ್ನಾಟಕ, ಕರ್ನಾಟಕ, 585323)	ಆಸ್ತಿ ಸಂಖ್ಯೆ ಆರ್‌ಡಿಪಿಆರ್ ಪಿಐಡಿ ಸಂಖ್ಯೆ 1530008012002 20743 ಮತ್ತು ಪಂಚಾಯಿತಿ/ಆಸ್ತಿ ಸಂಖ್ಯೆ 12/72 ಅನ್ನು ಹೊಂದಿರುವ ಮನೆ. ಇದು ಯಾದಗಿರಿ ಜಿಲ್ಲೆ, ಶಹಾಪುರ ತಾಲೂಕು, ಕನ್ನೇಕೊಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕನ್ನೇಕೋಲೂರು ಗ್ರಾಮದ ಜಪನಾಯಕ ತಾಂಡಾದಲ್ಲಿದೆ. ಅಳತೆ: ಪೂರ್ವ-ಪಶ್ಚಿಮ 18.288 ಮೀಟರ್ (60 ಅಡಿ) ಮತ್ತು ಉತ್ತರ-ದಕ್ಷಿಣ 12.192 ಮೀಟರ್ (40 ಅಡಿ). ಒಟ್ಟು ವಿಸ್ತೀರ್ಣ 222.96 ಚದರ ಮೀಟರ್ (2400 ಚದರ ಅಡಿ) ಆಗಿದ್ದು, ಇದರಲ್ಲಿ 32.70 ಚದರ ಮೀಟರ್ (352 ಚದರ ಅಡಿ) ನಿರ್ಮಿತ ಪ್ರದೇಶವಿದೆ. ನೋಂದಣಿ ಜಿಲ್ಲೆ: ಯಾದಗಿರಿ, ನೋಂದಣಿ ಕಚೇರಿ: ಶಹಾಪುರ.	ರೂ.864000 ರೂ.86400 ರೂ.10,000	26.11.2026 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ	ಸಾಲ ಖಾತೆ ಸಂಖ್ಯೆ:- 700011838706 ಕ್ಲೈಮ್ ಬಾಕಿ ಇರುವ ಮೊತ್ತ 22.01.2026 ರಂತೆ ರೂ.486260/- ಮತ್ತು 23.01.2026 ರಿಂದ ಹೆಚ್ಚಿನ ಬಡ್ಡಿಯೊಂದಿಗೆ ಮಾಸಿಕ ವಿಶ್ರಾಂತಿ, ಶುಲ್ಕಗಳು ಮತ್ತು ವೆಚ್ಚಗಳು ಇತ್ಯಾದಿ, (08.10.2026 ರಂತೆ ಒಟ್ಟು ಬಾಕಿ ರೂ.576051/-)
	ಖರೀದಿ ಮತ್ತು ಮಾರಾಟದ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಪ್ರಶ್ನೆಗಳಿಗೆ ಸಂಪರ್ಕಿಸಿ: ಸುದರ್ಶನ್ ಪಿ 7975022716 , ರವೀಂದ್ರ ಮಲಕಪ್ಪ ಕೊಂಬಿನ್.ಎಂ 9731952051				
4.	**ರಮೇಶ್ ತಾಯಪ್ಪ ಲಕ್ಷ್ಮಿ ಆನಂದ್ (ಎಲ್ಲರೂ ವಾಸ:** 12-6-1040/130/A ಪೋಸ್ಟಲ್ ರಸ್ತೆ ಹತ್ತಿರ, ಸೋಂಗನಾಯಕ್ ಲೇಔಟ್ ಎಲ್ ಬಿ ಎಸ್ ನಗರ, ರಾಯಚೂರು, ರಾಯಚೂರು, ಕರ್ನಾಟಕ- 584102)	ಸ್ಥಿರ ಆಸ್ತಿಯ ವಿವರ: ರಾಯಚೂರು ತಾಲೂಕು ಮತ್ತು ಜಿಲ್ಲೆಯ ರಾಯಚೂರಿನ ಸೋಂಗನಾಯ್ಕ್ ಲೇಔಟ್‌ನಲ್ಲಿರುವ, ಎಂಪಿಎಲ್ ಸಂಖ್ಯೆ12-6-1040/130/A, ಪ್ಲಾಟ್ ನಂ. 130/A, ಸರ್ವೆ ನಂ. 375/A, B, C ಮತ್ತು 380/D ಸಂಖ್ಯೆಗಳನ್ನು ಹೊಂದಿರುವ ಆಸ್ತಿ. ಇದರ ಗಡಿಗಳು: ಉತ್ತರಕ್ಕೆ - ರಸ್ತೆ, ದಕ್ಷಿಣಕ್ಕೆ - ಪ್ಲಾಟ್ ನಂ. 139, ಪೂರ್ವಕ್ಕೆ - ಪ್ಲಾಟ್ ನಂ. 129, ಪಶ್ಚಿಮಕ್ಕೆ - ಪ್ಲಾಟ್ ನಂ. 130/B.	ರೂ.1998000 ರೂ.199800 ರೂ.10,000	26.11.2026 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ	ಸಾಲ ಖಾತೆ ಸಂಖ್ಯೆ:- SERICHR0462515 / 200002492685 ಕ್ಲೈಮ್ ಬಾಕಿ ಇರುವ ಮೊತ್ತ 14.07.2025 ರಂತೆ ರೂ.1152396/- ಮತ್ತು 15.07.2025 ರಿಂದ ಹೆಚ್ಚಿನ ಬಡ್ಡಿಯೊಂದಿಗೆ ಮಾಸಿಕ ವಿಶ್ರಾಂತಿ, ಶುಲ್ಕಗಳು ಮತ್ತು ವೆಚ್ಚಗಳು ಇತ್ಯಾದಿ, (08.10.2026 ರಂತೆ ಒಟ್ಟು ಬಾಕಿ ರೂ.1548014/-)
	ಖರೀದಿ ಮತ್ತು ಮಾರಾಟದ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಪ್ರಶ್ನೆಗಳಿಗೆ ಸಂಪರ್ಕಿಸಿ: ಸುದರ್ಶನ್ ಪಿ 7975022716 , ರವೀಂದ್ರ ಮಲಕಪ್ಪ ಕೊಂಬಿನ್.ಎಂ 9731952051				

ಖರೀದಿದಾರರು/ಬಿಡ್ದಾರರು ಅರ್ನೆಸ್ಟ್ ಮನಿ ಡೆಪಾಸಿಟ್ (EMD) ಮೊತ್ತವನ್ನು NEFT/RTGS/DD ಮೂಲಕ "ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್" ಖಾತೆ ಸಂಖ್ಯೆ- 200000807725 ಮತ್ತು IFSC ಕೋಡ್- ESFB0001001 ಭಾಗ್ಯಂ ಗಲೇರಿಯಾ ಹೊಸ ಸಂಖ್ಯೆ 18, ಬಜುಲ್ಲಾ ರಸ್ತೆ ಟಿ-ನಗರ, ಚೆನ್ನೈ-600 117 ಖಾತೆಗೆ ಸಲ್ಲಿಸಬೇಕಾಗುತ್ತದೆ. **ದಿನಾಂಕ: 25.11.2026** ರಂದು ಅಥವಾ ಅದಕ್ಕೂ ಮೊದಲು ಯಾವುದೇ ರಾಷ್ಟ್ರೀಕೃತ ಅಥವಾ ನಿಗದಿತ ಬ್ಯಾಂಕಿನಿಂದ ಡ್ರಾ ಮಾಡಲಾಗಿದೆ.
ಇ-ಹರಾಜಿನ ನಿಯಮಗಳು ಮತ್ತು ಷರತ್ತುಗಳ ವಿವರಗಳಿಗಾಗಿ ದಯವಿಟ್ಟು www.equitas.bank.in & https://www.bankeauctions.com ನಲ್ಲಿ ಒದಗಿಸಲಾದ ಲಿಂಕ್ ಅನ್ನು ನೋಡಿ.

ದಿನಾಂಕ: 20.10.2026, ಸ್ಥಳ: ಕಲಬುರಗಿ **ಅಧಿಕೃತ ಅಧಿಕಾರಿ, ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್**

Udayakala is published by K.N.Puttalingaiah from no 1576, Rame Gowda Building, 2nd floor, V.V.Road, Mandya-571 401 on behalf of Anikethana Publication and Printers edited by K.N.Puttalingaiah and Printed by M.N.S. PRINTERS PVT LTD. 345/4, Bhattarahalli Near K R Puram, RTO Old Madras Road, Bengaluru- 560049 and also printed at Elegant Offset Printers Pvt Ltd Sy no. 650/3, Uchagaon- Belgundi ByPass Road, Uchagaon, Belgaum -501128, Manipal Media Network Limited Udayavani Building, Udayavani Road Manipal – 576 104, Manipal Media Network Ltd. Sy No. 7/2, Plat No. Ca-3/1, 28(D) &29 Kapnoor 2nd Stage, Industrial Area, Kapnoor Village Kalaburagi Taluka Kalaburagi,ELEGANT OFFSET PRINTERSPVT LTD Plat No-33/1, 15/1 (Eastern Part) MT Sagar Industrial Estate Gokul Road Hubballi -580030, ELEGANT OFFSET PRINTERS PVT LTD, SHREE LAKSHMINARAYANA RICE MILL SHREE SHANKARMUTT ROAD, Shimoga- 577 201. All rights reserved. Reproduction in whole or in part without written permission is prohibited. RNI REG NO. 71090/97.Volume:30 Issue: 126